## ಹೊಸ ತಾಲ್ಲೂಕುಗಳ ಮರು ವಿಂಗಡಣೆ

**862 (1501); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ)**

ಅ) ಧಾರವಾಡ ಜಿಲ್ಲೆಯಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಹೊಸದಾಗಿ ರಚಿಸಲಾಗುವ ತಾಲ್ಲೂಕುಗಳಿಗೆ ಯಾವ ಯಾವ ಗ್ರಾಮ ಸೇರ್ಪಡೆಗೊಳಿಸಲಾಗಿದೆ? (ಮಾಹಿತಿ ನೀಡುವುದು)

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)**

ಅ) ರಾಜ್ಯ ಸರ್ಕಾರ ದಿನಾಂಕ: 08.02.2013 ರಂದು ಮಂಡಿಸಿದ 2013–14ನೇ ಆಯವ್ಯಯದಲ್ಲಿ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಿದ್ದು, ಇವುಗಳಲ್ಲಿ ಧಾರವಾಡ ಜಿಲ್ಲೆಯ ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರಗಳು ಸೇರಿರುತ್ತವೆ.

ಆ) ತಾಲ್ಲೂಕುಗಳನ್ನು ರಚಿಸಿದ ನಂತರ ಮಾಹಿತಿ ಲಭ್ಯವಾಗುತ್ತದೆ.

## ಬ್ಯಾರೇಜ್ ಕೆರೆಗಳ ಅಭಿವೃದ್ಧಿ ಕಾಮಗಾರಿ

**863 (1502); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ**

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಕೈಗೊಳ್ಳುವ ಬ್ಯಾರೇಜ್ ಕೆರೆಗಳ ಅಭಿವೃದ್ಧಿಯ ಕಾಮಗಾರಿಗಳಿಗೆ ಮೂರು ವರ್ಷಗಳಲ್ಲಿ ಮೂರು ಕಂತಿನ ಮೂಲಕ ಹಣ ಬಿಡುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವತಿಯಿಂದ ಮಾಡುವ ಕಾಮಗಾರಿಗಳನ್ನು ಕೇವಲ ಒಂದೇ

ವರ್ಷದಲ್ಲಿ ಸಂಪೂರ್ಣವಾಗಿ ಮುಕ್ತಾಯ ಮಾಡುತ್ತಿರುವ ವಿಷಯ ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಸಣ್ಣ ನೀರಾವರಿ ಇಲಾಖೆಯಿಂದ ಈ ಕಾಮಗಾರಿಗಳನ್ನು ಒಂದೇ ವರ್ಷದಲ್ಲಿ ಮುಗಿಸಲು ಇರುವ ತೊಂದರೆ ಮತ್ತು ತೊಡಕುಗಳೇನು? (ವಿವರವಾದ ಮಾಹಿತಿ ಒದಗಿಸುವುದು)

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)**

ಅ) ಪ್ರತಿ ವರ್ಷ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ವಿವಿಧ ಯೋಜನೆ ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾಗುವ ಅನುದಾನವನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಆದೇಶಗಳನ್ವಯ ಪ್ರತಿ ಮಾಹೆಯಾನ ಕಾಮಗಾರಿಗಳಲ್ಲಾಗುವ ಪ್ರಗತಿಯನ್ನಾಧರಿಸಿ 1/12 ಭಾಗದಂತೆ ಬಾಕಿ ಬಿಲ್ಲುಗಳನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

ಪ್ರತಿವರ್ಷ ಸಣ್ಣ ನೀರಾವರಿ ಇಲಾಖೆಯ ಹೊಸ ಕಾಮಗಾರಿಗಳಿಗೆ ಅಪೆಂಡಿಕ್ಸ್–ಇ ತಯಾರಿಸಿ, ಅಂದಾಜು ಮೊತ್ತಕ್ಕೆ ಶೇ. 33 ರಷ್ಟು ಅನುದಾನ ಒದಗಿಸಲಾಗುವುದು. ಅಂದಾಜು ಪಟ್ಟಿಗಳಿಗೆ ಇಲಾಖೆಯ ಸಕ್ಷಮ ಪ್ರಾಧಿಕಾರವು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡುತ್ತದೆ.

ಅನುಮೋದಿತ ಕಾಮಗಾರಿಗಳನ್ನು ಪಾರದರ್ಶಕ ನಿಯಮದಡಿ ಟೆಂಡರ್ ಆಧಾರದ ಮೇಲೆ ವಹಿಸಿಕೊಟ್ಟು ಪೂರ್ಣಗೊಳಿಸಲಾಗುತ್ತಿದೆ. ಬಾಕಿ ಬಿಲ್ಲುಗಳನ್ನು ಅನುದಾನದ ಲಭ್ಯತೆಯನುಸಾರ ಪಾವತಿ ಮಾಡಲಾಗುತ್ತಿದೆ. ದೊಡ್ಡ ಮೊತ್ತದ ಕಾಮಗಾರಿಗಳಾಗಿದ್ದಲ್ಲಿ ಹಾಗೂ ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೈಗೊಳ್ಳುವ ಕೆಲವು ಕಾಮಗಾರಿಗಳನ್ನು ಭಾರಿ ಮಳೆ ಹಾಗೂ ನದಿ/ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಿರುವ ತಿಂಗಳುಗಳಲ್ಲಿ ಕೈಗೊಳ್ಳಲು

ಸಾಧ್ಯವಾಗುವುದಿಲ್ಲ. ಅಂತಹ ಕಾಮಗಾರಿಗಳನ್ನು ನಂತರದ ವರ್ಷ ಪೂರ್ಣಗೊಳಿಸಲಾಗುತ್ತಿದೆ. ಇಂತಹ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳೆಂದು ಪರಿಗಣಿಸಲ್ಪಡುತ್ತವೆ.

ಆ) ಬಂದಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೈಗೊಳ್ಳುವ ಸಣ್ಣ ನೀರಾವರಿ ಕಾಮಗಾರಿಗಳು ಸಣ್ಣ ಪ್ರಮಾಣದಲ್ಲಿದ್ದು, ಅನುದಾನಕ್ಕೆ ತಕ್ಕಂತೆ ಆಯಾ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಿ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಒಂದೇ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

ಇ) ಸಣ್ಣ ನೀರಾವರಿ ಇಲಾಖೆಯಡಿ ಕಾಮಗಾರಿಗಳ ಅಂದಾಜು ಮೊತ್ತವನ್ನಾಧರಿಸಿ ಹಾಗೂ ಕಾಮಗಾರಿಯನ್ನು ನಿರ್ವಹಿಸಲು ಲಭ್ಯವಿರುವ ಸಮಯವನ್ನಾಧರಿಸಿ ಟೆಂಡರ್ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲ ಮಿತಿ ನಿಗಧಿಪಡಿಸಲಾಗುತ್ತಿದೆ.

## ಪಶ್ಚಿಮ ಘಟ್ಟ ಕಾರ್ಯಪಡೆ

**864 (64); ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪುರ)**

ಅ) ಪಶ್ಚಿಮ ಘಟ್ಟ ಕಾರ್ಯಪಡೆ ಸಂಸ್ಥೆಯು ಸರ್ಕಾರದ ಅಧಿಕೃತ ಸಂಸ್ಥೆಯೇ;

ಆ) ಹಾಗಿದ್ದಲ್ಲಿ 2008 ರಿಂದ 2013 ರ ವರೆಗೆ ಈ ಸಂಸ್ಥೆಯ ಅಧ್ಯಕ್ಷರ ಹುದ್ದೆ ನಿರ್ವಹಣೆಗಾಗಿ ಸರ್ಕಾರದಿಂದ ಮಾಡಿರುವ ಖರ್ಚು-ವೆಚ್ಚಗಳೆಷ್ಟು? (ವಿವರ ನೀಡುವುದು)